# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1170 |
| ಸದಸ್ಯರ ಹೆಸರು | : | ಡಾ. ವೈ. ಎ. ನಾರಾಯಣಸ್ವಾಮಿ |
| ಉತ್ತರಿಸುವ ದಿನಾಂಕ | : | 20.12.2018 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿ |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಂಡಿದೆಯೇ; | ಹೌದು |
| ಆ) | ಹಾಗಿದ್ದಲ್ಲಿ ಯಾವ ದಿನಾಂಕದವರೆವಿಗೆ ಹುದ್ದೆಗಳನ್ನು ತುಂಬಲು ಅನುಮತಿಸಲಾಗಿದೆ. | ದಿನಾಂಕ : 31/12/2015ರವರೆಗೆ ಅನುಮತಿ ನೀಡಲಾಗಿರುತ್ತದೆ. |
| ಇ) | ಈ ಹುದ್ದೆಗಳನ್ನು ತುಂಬಲು ಜಿಲ್ಲೆಯ/ರಾಜ್ಯದ ಸರಾಸರಿ ಫಲಿತಾಂಶವನ್ನು ಮಾನದಂಡವನ್ನಾಗಿಸಿ ಆದೇಶಿಸಲಾಗಿದೆಯೇ; | ಹೌದು |
| ಈ) | ಹಾಗಿದ್ದಲ್ಲಿ, ಇದರಿಂದಾಗುತ್ತಿರುವ ದುಷ್ಪರಿಣಾಮಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅನುದಾನಿತ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಪ್ರೌಢಶಾಲೆಯ ಕಳೆದ ಐದು ವರ್ಷಗಳ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವು ಸಂಬಂಧಪಟ್ಟ ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು ಅಥವಾ ಸಮನಾಗಿರಬೇಕೆಂದು ವಿಧಿಸಿರುವ ಷರತ್ತು ಈ ಕೆಳಕಂಡ ಅಂಶಗಳಿಗೆ ಪೂರಕವಾಗಿರುತ್ತದೆ;-<br>1. ವಿದ್ಯಾರ್ಥಿಗಳ ಕಲಿಕಾ ಸಾಮರ್ಥವನ್ನು ಮತ್ತು ಶಿಕ್ಷಕರಲ್ಲಿ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಲು;<br>2. ಶಾಲೆಯಲ್ಲಿ ದಾಖಲಾತಿ ಹೆಚ್ಚಿಸಲು;<br>3. ವಿದ್ಯಾರ್ಥಿಗಳ ಮತ್ತು ಶಾಲೆಯ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಕಾಯ್ದುಕೊಳ್ಳಲು;<br><br>ಖಾಸಗಿ ಪ್ರೌಢಶಾಲೆಗಳಿಗೆ ಸರಕಾರದಿಂದ ಅನುದಾನ ಒದಗಿಸುವ ಪ್ರಮುಖ ಉದ್ದೇಶವೇ ಶೈಕ್ಷಣಿಕ ಗುಣಮಟ್ಟ ಕಾಪಾಡುವುದಾಗಿದೆ. ಆದ್ದರಿಂದ, ಸದರಿ ಷರತ್ತು ಸತ್ಪರಿಣಾಮಕಾರಿಯಾಗಿರುತ್ತದೆ. |

(ಹೆಚ್. ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ

ಸಂಖ್ಯೆ: ಇಡಿ 709 ಎಸ್ಇಎಸ್ 2018)